3) ಕೆ.ಎನ್.ಭಟ್, ಶಿರಾಡಾಪಾಲ್
ಕಡಿರುದ್ಯಾವರ,
ಬೆಳ್ತಂಗಡಿ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

ಯಕ್ಷಗಾನ ಮತ್ತು ಜಾನಪದ ಕ್ಷೇತ್ರ

1) ಕೊಗ್ಗ ಕಾಮತ್, ಉಪ್ಪಿನಕುದ್ರು-576 230, ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

2) ಆಲಿಕೆ ರಾಮರಾಯರಾಯ್ ವಿಠಲ್, ಅಳಕಾ, ಅಂಚೆ ಹಿರೇ ಬಂಡಾಡಿ 574-306, ದಕ್ಷಿಣ ಕನ್ನಡ ಜಿಲ್ಲೆ.

3) ಬೋಳಾರ ನಾರಾಯಣ ಶೆಟ್ಟಿ, ಬೋಳಾರಾ ಹೌಸ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

4) ಆಗರಿ ಶ್ರೀನಿವಾಸ ಭಾಗವತರ್, ಶಿಬ್ರಿಕೆರೆ ಅಂಚೆ, ಮಂಗಳೂರು, ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

5) ಬಣ್ಣದ ಮಹಾಲಿಂಗ, ಕಲ್ಲುಗುಂಡಿ ಅಂಚೆ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

6) ಚಿಪ್ಪಾರು ಕೃಷ್ಣಯ್ಯ ಬಲ್ಲಾಳ, ಕೇರಾಫ್ ಶ್ರೀಪತಿ ತುಂಬನರಾಯ್, ಬೆಂಡೂರು ಅಡ್ಡರಸ್ತೆ, ಮಂಗಳೂರು-2, ದಕ್ಷಿಣ ಕನ್ನಡ ಜಿಲ್ಲೆ.

7) ವಿಠಲ ಗೋಪಾಲಕೃಷ್ಣ ಜೋಶಿ, "ರಸಿಕ ರತ್ನ" ಯಕ್ಷಗಾನ ಕಲಾವಿದ, ವಿಟ್ಲ-574 243.

8) ಅಣ್ಣಪ್ಪ ಮಿಜಾರ್, ಬೆಡಗ ಎಡಪದವುಗ್ರಾಮ,-ಬೆಡಗ ಎಡಪದವು ಅಂಚೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

9) ಎಂ .ಎ. ಹೆಗ್ಗಡೆ, ನ್ಯಾಯವಾದಿಗಳು, ಕುಂದಾಪುರ, ದಕ್ಷಿಣ ಕನ್ನಡಜಿಲ್ಲೆ.

10) ಕುಂಬಳೆ ಸುಂದರರಾವ್, ಶ್ರೀ ಧರ್ಮಸ್ಥಳ ಯಕ್ಷಗಾನ ಮಂಡಳಿ, ಪಡಿಲು ಅಂಚೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

11) ಕಿರಿಕ್ಕಾಡಿ ಮಾಸ್ಟರ್‌ವಿಷ್ಣುಭಟ್, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ.

12) ಗೋಪಾಲಕೃಷ್ಣ ಕಾಮತ್, ಮಂದರ್ತಿ, ಉಡುಪಿ ತಾಲ್ಲೂಕು,ದಕ್ಷಿಣ ಕನ್ನಡ ಜಿಲ್ಲೆ.

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಗೆ ಖಾಯಂ ಅಧಿಕಾರಿಯ ನೇಮಕ

219-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಆಡಳಿತವನ್ನು ನಿರ್ವಹಿಸಲು ಅಧಿಕಾರಿಯನ್ನು ನೇಮಕ ಮಾಡಲಾಗಿದೆಯೇ?

ಅ) ಆ ಅಧಿಕಾರಿಯನ್ನು ಅಕಾಡೆಮಿಗೆ ಖಾಯಂ ಆಗಿ ನಿಯೋಜಿಸಲಾಗಿದೆಯೇ

ಇ) ಹಾಗಿಲ್ಲದಿದ್ದರೆ ಖಾಯಂ ಆಗಿ ನಿಯೋಜಿಸದಿರಲು ಕಾರಣಗಳೇನು?

ಈ) ಖಾಯಂ ಆಗಿ ಪೂರ್ಣ ಪ್ರಮಾಣದ ಒಬ್ಬ ಅಧಿಕಾರಿಯನ್ನು ಆಡಳಿತ ನಿರ್ವಹಿಸಲು ಏಕೆ ನಿಯೋಜಿಸಬಾರದು.

ಉ) ನಿಯೋಜಿಸಲು ಅಧಿಕಾರಿಗಳ ಕೊರತೆ ಇದ್ದಲ್ಲಿ ಇನ್ನೊಂದು ಇಲಾಖೆಯಿಂದ ನಿಯೋಜನೆ ಮೇರೆಗೆ ಏಕೆ ಪಡೆಯಬಾರದು.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಅಕಾಡೆಮಿಯ ಕೆಲಸವನ್ನು ನಿರ್ವಹಿಸಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯೊಬ್ಬರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿದೆ.

ಆ) ಇ) ಈ) ಮತ್ತು ಉ) ಅಕಾಡೆಮಿಯ ಆಡಳಿತ ಮಂಡಳಿಯು ಅಕಾಡೆಮಿಯ ಚಟುವಟಿಕೆಗಳಿಗೆ ಬೇಕಾದ ನಿರ್ದೇಶಕರ ಹುದ್ದೆ ಮತ್ತು ಸಿಬ್ಬಂದಿ ವರ್ಗವನ್ನು ಈಗಾಗಲೇ ಪರಿಶೀಲಿಸುತ್ತಿದೆ. ಅಕಾಡೆಮಿಯಲ್ಲಿ ಒಬ್ಬ ನಿರ್ದೇಶಕರು ಇರುತ್ತಾರೆಂದು ಸರ್ಕಾರಿ ಆದೇಶದಲ್ಲಿ ಷರತ್ತನ್ನು ವಿವರಿಸಿದೆ. ನಿರ್ದೇಶಕರು ಹುದ್ದೆ ಬೇರೆಯಾಗಿ ಸೃಜಿಸುವವರೆಗೆ ಖಾಯಂ ಆಗಿ ನಿಯೋಜಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ನಗರದಲ್ಲಿ ಆಗಿರುವ ಹಲ್ಲೆ ಮತ್ತು ಕೊಲೆ ಪ್ರಕರಣ

351-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 2-1-94ರಂದು ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳು ನಡೆದಿದೆಯೇ?

ಆ) ಹಾಗಿದ್ದಲ್ಲಿ, ಒಬ್ಬ ಪೊಲೀಸ್ ಪೇದೆಯನ್ನು ದರೋಡೆಕೋರರು ಕೊಲೆ ಮಾಡಿರುವುದು ನಿಜವೇ?

ಇ) ಅದೇ ದಿವಸ ಶ್ರೀ ಉಮಾಕಾಂತ್ ನಾಗಾರ್ಥರ್ಲ್ಲಿ ಎಂಬುವವರ ಮೇಲೂ ಸಹ ಹಲ್ಲೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮೃತಪಟ್ಟ ಪೊಲೀಸ್ ಪೇದೆಯವರ ಮನೆಯವರಿಗೆ ಸರ್ಕಾರ ನೀಡಿರುವ ಪರಿಹಾರ ಧನವೆಷ್ಟು?

ಉ) ಶ್ರೀ ಉಮಾಕಾಂತ್‌ರವರ ವೈದ್ಯಕೀಯ ಖರ್ಚನ್ನು ಸರ್ಕಾರ ಭರಿಸುತ್ತದೆಯೇ?

ಊ) ಆ ಪ್ರಕರಣಕ್ಕೆ ಕಾರಣರಾದವರನ್ನು ಕಂಪಿಹಿಡಿಯಲಾಗಿದೆಯೇ?

ಋ) ಮೃತಪಟ್ಟ ಪೊಲೀಸರ ಪತ್ನಿಗೆ ಸರ್ಕಾರ ಅನುಕಂಪದ ಆಧಾರದ ಮೇಲೆ ನೌಕರಿ ನೀಡುತ್ತಿದೆಯೇ?

ಋೂ) ಬೀದರ್ ನಗರದಲ್ಲಿ ಹಲ್ಲೆ ಹಾಗೂ ಕೊಲೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು ಇಂಥ ಒಂದು ಪ್ರಕರಣ ನಡೆದಿದೆ.

ಆ) ದಿನಾಂಕ : 2: 3-1-94ರಂದು ರಾತ್ರಿ ಪೊಲೀಸ್ ಪೇದೆಗಳಾದ ಶ್ರೀ ಚಂದ್ರಕಾಂತ್ (ಪಿಸಿ 459) ಮತ್ತು ಶ್ರೀ ಯೇಸುದಾಸ್ (ಪಿಸಿ 1043) ರಾತ್ರಿ ಗಸ್ತು ಮಾಡುತ್ತಿದ್ದಾಗ ಇಬ್ಬರು ಅಪರಿಚಿತ ವ್ಯಕ್ತಿಗಳು ಶ್ರೀ ಚಂದ್ರಕಾಂತ್‌ರನ್ನು ತಿವಿದು ಪರಾರಿಯಾಗಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸದರೀ ಪೇದೆಯು ಮೃತಪಟ್ಟಿದ್ದಾರೆ. ಈ ಕೃತ್ಯವು ಕಳ್ಳರಿಂದ ನಡೆದಿರಬಹುದೆಂದು ಶಂಕಿಸಲಾಗಿದೆ.